ಕೌನ್ಸಿಲ್‌ನಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ದೇಶನ ನೀಡಲಾಗುವುದು.

ಕಂದಾಯ ಇಲಾಖೆಯ ಅನುದಾನ
188 (283)

ಮಾನ್ಯ ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) ವಿಧಾನ ಸಭೆ ಸದಸ್ಯರು.

ಅ) ಕಳೆದ ವರ್ಷದಲ್ಲಿ ಕಂದಾಯ ಇಲಾಖೆಗಳಿಗೆ ಆಯವ್ಯದಲ್ಲಿ ಒದಗಿಸಲಾದ ಅನುದಾನವೆಷ್ಟು? ಆ ಹಣವು ಯಾವ್ಯಾವುದಕ್ಕೆ ಖರ್ಚಾಗಿರುತ್ತದೆ? (ವಿವರ ನೀಡುವುದು)

ಆ) ಹಾಗಿದ್ದಲ್ಲಿ, ಒದಗಿಸಲಾದ ಅನುದಾನದಲ್ಲಿ ಅನುಷ್ಠಾನವಾಗದೇ ಇರಲು ಕಾರಣವೇನು?

ಇ) ಇದಕ್ಕೆ ಸರ್ಕಾರದ ಮಾನದಂಡವೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಉಪಮುಖ್ಯಮಂತ್ರಿ (ಕಂದಾಯ)

ಅ) 2011–12ನೇ ಸಾಲಿನಲ್ಲಿ ಒಟ್ಟು ರೂ.258287.16 ಲಕ್ಷಗಳ ಅನುದಾನವನ್ನು ಒದಗಿಸಲಾಗಿತ್ತು. ವಿವರಗಳನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.

ಆ) ವಿವರಗಳನ್ನು ಇಲಾಖಾವಾರು ಅನುಬಂಧ 2 ರಲ್ಲಿ ಒದಗಿಸಿದೆ.

ಇ) ಉದ್ಭವಿಸುವುದಿಲ್ಲ.

ಅನುಬಂಧ–1

(ರೂ ಲಕ್ಷಗಳಲ್ಲಿ)

ಕ್ರ.ಸಂ	ಇಲಾಖೆ	2011–12 ರಲ್ಲಿ ಒದಗಿಸಲಾದ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚ	ಉಳಿಕೆ
1	ಪಿಂಚಣಿ ನಿರ್ದೇಶನಾಲಯ	238140.00	238140.00	238044.39	95.61
2	ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳು ಭೂಮಿಕೋಶ	1386.25	624.75	544.12	80.63
3	ನೋಂದಣಿ ಮತ್ತು ಮುದ್ರಾಂಕ	7571.91	7571.91	5875.12	1696.79
4	ಧಾರ್ಮಿಕ ದತ್ತಿ ಇಲಾಖೆ	3049.00	3049.00	2975.90	73.10
5	4 ಅಭಿವೃದ್ಧಿ ಮಂಡಳಿಗಳು/ಪ್ರಾಧಿಕಾರ	1195.00	1195.00	1195.00	–
6	ಮಿನಿವಿಧಾನಸೌಧ ಮತ್ತು	2500.00	2500.00	2001.26	498.74
	ಜಿಲ್ಲಾಸಂಕೀರ್ಣಗಳು	4445.00	4445.00	2578.23	1866.77
ಒಟ್ಟು		**258287.16**	**257525.66**	**253214.02**	**4311.64**

ಅನುಬಂಧ–2

1	ಪಿಂಚಣಿ ನಿರ್ದೇಶನಾಲಯ	ಲಭ್ಯವಿದ್ದ ಅರ್ಹ ಫಲಾನುಭವಿಗಳ ಆಧಾರದ ಮೇಲೆ ಅನುದಾನ ವೆಚ್ಚವಾಗಿರುತ್ತದೆ.
2	ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳು, ಯು.ಪಿ.ಓ.ಆರ್ ಮತ್ತು ಭೂಮಿಕೋಶ	ಇಲಾಖೆಗೆ ಸೇರುವ ಭೂಮಾಪಕರುಗಳಿಗೆ ಅಗತ್ಯ ತರಬೇತಿ ನೀಡಲು ಹಾಗೂ ಗಣಕಯಂತ್ರ ಇತ್ಯಾದಿ ಖರೀದಿಗೆ ಅನುದಾನವನ್ನು ಕಾಯ್ಕರಿಸಿದ್ದು ನೇಮಕಾತಿ ಪ್ರಕ್ರಿಯೆ ಪೂರ್ಣವಾಗದ ಕಾರಣ ಅನುದಾನ ವೆಚ್ಚವಾಗಿರುವುದಿಲ್ಲ. ಬೆಂಗಳೂರು ನಗರದಲ್ಲಿ ಯು.ಪಿ.ಓ.ಆರ್ ಪ್ರಾರಂಭಿಸುವ ಸಂಬಂಧ ಇತರೆ ಇಲಾಖೆಗಳಿಂದ ಸಹಮತ ದೊರೆಯದ ಕಾರಣ 80.27% ರಷ್ಟು ಅನುದಾನ ಮಾತ್ರ ಬಳಕೆಯಾಗಿದೆ. ಭೂಮಿ ಕೋಶ ಯೋಜನೆಗೆ ಒದಗಿಸಲಾದ ಅನುದಾನವನ್ನು ಸಂಪೂರ್ಣ ವೆಚ್ಚ ಮಾಡಲಾಗಿದೆ.
3	ನೋಂದಣಿ ಮತ್ತು ಮುದ್ರಾಂಕ	ಮುದ್ರಾಂಕ ಮಾರಾಟವನ್ನು ನಿಷೇಧಿಸಿರುವುದರಿಂದ ರೂ.5875.12 ಲಕ್ಷ ಉಪಯೋಗಿಸಿಕೊಳ್ಳಲಾಗಿಲ್ಲ.
4	ಧಾರ್ಮಿಕ ದತ್ತಿ ಇಲಾಖೆ	ಮಾನಸ ಸರೋವರ ಯಾತ್ರಿಕರಿಗೆ ಸಹಾಯಧನಕ್ಕೆ 1253 ಅರ್ಜಿಗಳು ಮಾತ್ರ ಸ್ವೀಕೃತವಾಗಿದ್ದು ಉಳಿಕೆ 73.10 ಲಕ್ಷ ಆಧ್ಯರ್ಪಣೆ ಮಾಡಿದೆ. ಇತರೆ
5	4 ಅಭಿವೃದ್ಧಿ ಮಂಡಳಿಗಳು/ಪ್ರಾಧಿಕಾರ	ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ, ಗಾಂಧಿಭವನ ಬಿಡುಗಡೆಯಾದ ಅನುದಾನ ಸಂಪೂರ್ಣ ವೆಚ್ಚವಾಗಿದೆ.
6	ವಿಧಾನಸೌಧ ಮತ್ತು ಜಿಲ್ಲಾಸಂಕೀರ್ಣಗಳು	ಪ್ರಸಾವನೆಗಳು ಸ್ವೀಕೃತವಾಗದಿದ್ದುದರಿಂದ ಹಣ ಬಿಡುಗಡೆಯಾಗಿರುವುದಿಲ್ಲ.